(ಇಂದು ದಿಃ 21-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
ಮುಂದುವರೆದ **ವಾಟೀ ಸವಾಲು :- ಶ್ರೀSKD ವಕೀಲರಿಂದ :-**

ವಿಭಾಗ ಪತ್ರ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದನ್ನು ನನ್ನ ವಕೀಲರಿಗೆ ತೋರಿಸಿದ್ದೇನೆ. ಸದರಿ ವಿಭಾಗ ಪತ್ರದಲ್ಲಿ ನಾರಾಯಣರೆಡ್ಡಿಗೆ ಸರ್ವೆ ನಂಬರ 294, 300, 301, 414, 415, 408, 413, 376 ರಲ್ಲಿನ ಜಮೀನುಗಳು ಹೋಗಿವೆ. ನನ್ನ ತಾಯಿಗೆ ಸರ್ವೆ ನಂಬರ 344/2, 345/2 ರಲ್ಲಿನ ಜಮೀನುಗಳು ಹೋಗಿವೆ. ಸುದರ್ಶನರೆಡ್ಡಿಗೆ ಸರ್ವೆ ನಂಬರ 276, 445, 449, 272, 273, 274, 275 ರಲ್ಲಿನ ಜಮೀನುಗಳು ಹೋಗಿವೆ. ಜಗನಮೋಹನರೆಡ್ಡಿಗೆ ಸರ್ವೆ ನಂಬರ 2, 3, 4, 24, 25 ರಲ್ಲಿನ ಜಮೀನುಗಳು ಹೋಗಿವೆ. ನನ್ನ ಭಾಗಕ್ಕೆ ಸರ್ವೆ ನಂಬರ 97, 222, 351, 407 ರಲ್ಲಿನ ಜಮೀನುಗಳು ಬಂದಿವೆ. ಸದರಿ ವಿಭಾಗ ಆಗಿ 50 ವರ್ಷಕ್ಕಿಂತ ಹೆಚ್ಚಾಗಿದೆ. ವಿಭಾಗದಂತೆ ಅವರವರ ಹೆಸರಿಗೆ ಪಹಣಿ ಆದಾವು. ವಿಭಾಗದಂತೆ ಅವರವರಿಗೆ ಬಂದ ಜಮೀನುಗಳಲ್ಲಿ ಅವರವರೇ ಕಬ್ಜಾದಲ್ಲಿದ್ದಾರೆ.

ನನ್ನ ದಿಃ 29-05-2002 ರಂದು ಹೃದಯಾಘಾತದಿಂದ ತೀರಿಹೋಗಿದ್ದಾರೆ. ಅದಕ್ಕಿಂತ 6 ತಿಂಗಳ ಮುಂಚೆ ಮೃತ್ಯು ಪತ್ರ ಬರೆದು ಇಟ್ಟಿದ್ದರು. ದಿನಾಂಕ ನೆನಪಿಲ್ಲ. ಸದರಿ ಮೃತ್ಯು ಪತ್ರ ನೋಂದಣಿ ಆಗಿಲ್ಲ. ಅದಕ್ಕೆ ಸಾಕ್ಷಿದಾರರು ಎಂದು ಯಾರು ಸಹಿ ಮಾಡಿದ್ದಾರೆ ನನಗೆ ನೆನಪಿಲ್ಲ. ಸಾಕ್ಷಿಗೆ 2 ಪಹಣಿಗಳು ತೋರಿಸಲಾಗಿ ಅವುಗಳಲ್ಲಿ ಸುದರ್ಶನ ರೆಡ್ಡಿ ಹೆಸರಿನಲ್ಲಿ 20 ಎಕರೆ 24 ಗುಂಟೆ ಜಮೀನು ಇದೆ ಎಂದು ಹೇಳಿದ್ದು ಸದರಿ 2 ಪಹಣಿಗಳನ್ನು ನಿಡಿ-31 ಮತ್ತು 32 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೂ 4 ಪಹಣಿಗಳನ್ನು ತೋರಿಸಲಾಗಿ ಅವುಗಳಲ್ಲಿ ಜಗಮೋಹನರೆಡ್ಡಿ ಹೆಸರಿಗೆ ಜಮೀನು ಇದೆ ಎಂದು ಹೇಳಿದ್ದು ಸದರಿ ಪಹಣಿಗಳನ್ನು ನಿಡಿ-33 ರಿಂದ 36ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 24-07-2015 ರ ನೋಂದಾಯಿತ ಕ್ರಯ ಪತ್ರದ ದೃಢಿಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ಸುದರ್ಶನ ರೆಡ್ಡಿ ಜಮೀನು ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದು ಸದರಿ ಕ್ರಯ ಪತ್ರವನ್ನು ನಿಡಿ-37 ಎಂದು ಗುರುತಿಸಲಾಯಿತು. ಸದರಿ ಕ್ರಯ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಸದರಿ ಕ್ರಯ ಪತ್ರಕ್ಕೆ ಜಗಮೋಹನರೆಡ್ಡಿ, ಶ್ರೀಕಾಂತ ರೆಡ್ಡಿ, ಶಿವಾರೆಡ್ಡಿ ಮತ್ತು ಶ್ರೀನಿವಾಸರೆಡ್ಡಿ ಜಿಲ್ಲೆಡಪಲ್ಲಿ ರವರು ಕೂಡ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಇನ್ನೊಂದು ಕ್ರಯ ಪತ್ರದ ದೃಢಿಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ದಿಃ 14-09-2016 ರಂದು ನಾನು ಖರೀದಿ ಪತ್ರ ಬರೆದುಕೊಟ್ಟಿದ್ದೇನೆ ಎಂದು ಹೇಳಿದ್ದು ಸದರಿ ಖರಿದಿ ಪತ್ರವನ್ನು ನಿಡಿ-38 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 16-11-2016 ರ ಹೇಳಿಕೆ ಪತ್ರ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಹೇಳಿಕೆ ಪತ್ರವನ್ನು ನಿಡಿ-39 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 19-02-2016 ರ simple mortgage ನ ದೃಢಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ-40 ಎಂದು ಗುರುತಿಸಲಾಯಿತು.

ನಿಡಿ-26 ರಲ್ಲಿ ಯಕಮ್ಮೈ ಗ್ರಾಮದಲ್ಲಿ 136 ಎಕೆರೆ ಜಮೀನು ಇದ್ದ ಬಗ್ಗೆ ತೋರಿಸಿಲ್ಲ ಎಂದರೆ ಸರಿ. ನಾನು ಆರಂಭದಲ್ಲಿ ಹೇಳಿದಂತೆ ಭಾಗ ಆಗಿರುವ ಮಾಹಿತಿಯನ್ನು ನನ್ನ ವಕೀಲರಿಗೆ ಹೇಳಿದ್ದೇನೆ. ಸದರಿ ಸಂಗತಿಗಳನ್ನು ವಾದ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ನಾನು ವಾದ ಪತ್ರದಲ್ಲಿ ಆಬಗ್ಗೆ ಯಾವುದೇ ಸಂಗತಿಗಳನ್ನು ಹೇಳಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿಗಳು ನಮ್ಮ 3 ಜನ ಸಹೋದರರ ನಡುವೆ ಜಂಟಿಯಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹರಾಜಿನಲ್ಲಿ ನನ್ನ ತಂದೆಗೆ ಬಂದಿದ್ದ 257 ಎಕರೆ ಜಮೀನಿನಲ್ಲಿ ನನ್ನ ಸಹೋದರಿಯಾದ ಜಯಶ್ರೀ ಮತ್ತು ಪದ್ಮ ರವರಿಗೆ ಜಮೀನು ಕೊಟಿಲ್ಲ. ಅವರಿಗೆ ಯಕಮ್ಮೈ ಗ್ರಾಮದ

ಜಮೀನಿನಲ್ಲಿ ಕೂಡ ಜಮೀನು ಕೊಟ್ಟಿಲ್ಲ. ಮುಧೋಳದಲ್ಲಿ ನನ್ನ ತಂದೆ ಹೆಸರಿನಲ್ಲಿ 257 ಎಕರೆ ಜಮೀನು ಇದ್ದು ಅದನ್ನು ಹೊರತುಪಡಿಸಿ ಒಂದು ವಾಸದ ಮನೆ ಕೂಡ ಇಲ್ಲ ಎಂದರೆ ಸರಿಯಲ್ಲ. ವೆಂಕಟರಾಮರೆಡ್ಡಿ ಬದುಕಿರುವವರೆಗೆ ಸದರಿ 257 ಎಕರೆ ಅವರ ಕಬ್ಜಾ ಮತ್ತು ವೈಹಿವಾಟಿನಲ್ಲಿ ಇತ್ತು ಎಂದರೆ ಸರಿಯಲ್ಲ. ಅವರು ತೀರಿಹೋದ ಮೇಲೆ ಎಲ್ಲಾ ಒಟ್ಟು ಕುಟುಂಬದ ಆಸ್ತಿಗಳಿಗೆ 5ನೇಪ್ರತಿವಾದಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5ನೇ ಪ್ರತಿವಾದಿ ಕಾನೂನು ಬಾಹಿರವಾಗಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ನಾವು 3 ಜನ ಅಣ್ಣ ತಮ್ಮಂದಿರು ದಿಃ 27-06-2015 ರಂದು ಮುಧೋಳದಲ್ಲಿನ ಮನೆಗೆ ಹೋಗಿ ಎಲ್ಲಾ ಒಟ್ಟು ಕುಟುಂಬದ ಸ್ವತ್ತುಗಳ ಸಂಬಂಧ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಪ್ರಕಾರ 28-06-2015 ರಂದು ಶ್ರೀಕಾಂತ ರೆಡ್ಡಿ ತನ್ನ ಕೈಬರಹದಲ್ಲಿ ನಿಡಿ-31 ರಂತೆ ಪಾಲು ಪಟ್ಟಿ ಬರೆದರು ಎಂದರೆ ಸರಿಯಲ್ಲ. ನಿಡಿ-31ಕ್ಕೆ 3 ಜನ ಸಹೋದರರು ಸಹಿ ಮಾಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು SKD ವಕೀಲರು ಹೇಳಿದ ಮೇರೆಗೆ ಸಹಿ ಮಾಡಿದ್ದೇನೆ. ನನಗೆ ನಿಡಿ-31 ರ ಸಂಗತಿಗಳು ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಡಿ-31ನ್ನು ಮುಧೋಳ ಗ್ರಾಮದಲ್ಲಿ ನನ್ನ ಸಮಕ್ಷಮ ಕೈ ಬರವಣಿಗೆಯಲ್ಲಿ ಬರೆದು ತಯ್ಯಾರಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಗೆ ಮದುಸುಧನರೆಡ್ಡಿಯ ಅಕ್ಕನ ಗಂಡ ವೆಂಕಟರಾಮರೆಡ್ಡಿ, ಶ್ರೀನಿವಾಸರೆಡ್ಡಿ ಜಿಲ್ಲೆಡ ಪಲ್ಲಿ, ಶಿವಾರೆಡ್ಡಿ ಹೂವಿನಬಾವಿ ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-31 ರಬಗ್ಗೆ ನಮಗೆ ಮಾಹಿತಿ ಇದ್ದರು ಸದರಿ ದಾಖಲಾತಿಯನ್ನು ನಾನಾಗಲಿ ನನ್ನ ಸಹೋದರರಾಗಲಿ ಪ್ರಶ್ನೇ ಮಾಡಿಲ್ಲ ಎಂದರೆ ನನಗೆ ಸದರಿ ಪತ್ರ ಆಗಿದ್ದು ಗೊತ್ತಿಲ್ಲ ಎಂದು ಹೇಳುತ್ತಾರೆ. SKD ವಕೀಲರು ಹೇಳಿದ ಮೇರೆಗೆ ನಿಡಿ-31ಕ್ಕೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2009 ರಲ್ಲಿ ನನ್ನ ಮದುವೆ ಆಗಿದೆ. ನನ್ನ ಮದುವೆ ತಿರುಪತಿಯಲ್ಲಿ ಆಗಿದೆ. ನಾನು ಮತ್ತು ನನ್ನ ಹೆಂಡತಿ ಬೇರೆ ಬೇರೆ ಜನಾಂಗಕ್ಕೆ ಸೇರಿದವರು. ನಾನು ತಿರುಪತಿಯಲ್ಲಿ ಮದುವೆ ಆದ ನಂತರ ಹೆಂಡತಿಯನ್ನು ಕರೆದುಕೊಂಡು ನೇರವಾಗಿ ಮುಧೋಳದ 5ನೇ ಪ್ರತಿವಾದಿ ಮನೆಗೆ ಬಂದಿದ್ದೆ ಎಂದರೆ ಸರಿಯಲ್ಲ. ಆರೀತಿ ಬಂದಾಗ 5ನೇ ಪ್ರತಿವಾದಿ ನಮ್ಮನ್ನು ಮನೆಗೆ ಸೇರಿಸಿಕೊಳ್ಳದೆ ನಿಮ್ಮ ಊರಿಗೆ ಹೋಗು ಎಂದು ನನಗೆ ಹೇಳಿದರು ಎಂದರೆ ಸರಿಯಲ್ಲ. ಅದೇ ವೈಮನಸ್ಸು ಇಟ್ಟುಕೊಂಡು 5ನೇಪ್ರತಿವಾದಿ ಮೇಲೆ ದ್ವೇಷ ಇಟ್ಟುಕೊಂಡು 5ನೇ ಪ್ರತಿವಾದಿ ವಿರುದ್ದ ಸುಳ್ಳು ದಾವೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ

ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ನಿಡಿ-31 ರಪ್ರಕಾರ ಅವರವರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಅವರವರು ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**